# PAPER-III
# KANNADA

**Signature and Name of Invigilator**

1. (Signature) ______________________
   (Name) ______________________
2. (Signature) ______________________
   (Name) ______________________

OMR Sheet No. : .............................................
(To be filled by the Candidate)

Roll No. | | | | | | | | |
(In figures as per admission card)

Roll No.______________________________
(In words)

| J | 2 | 1 | 1 | 6 |
|---|---|---|---|---|

Time : **2 $^{1}/_{2}$** hours] [Maximum Marks : **150**

Number of Pages in this Booklet : **16** Number of Questions in this Booklet : **75**

## Instructions for the Candidates

1. Write your roll number in the space provided on the top of this page.
2. This paper consists of seventy five multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the Test Booklet Number should be entered on the OMR Sheet and the OMR Sheet Number should be entered on this Test Booklet.
4. Each item has four alternative responses marked (1), (2), (3) and (4). You have to darken the circle as indicated below on the correct response against each item.
   **Example :** ① ② ● ④
   where (3) is the correct response.
5. Your responses to the items are to be indicated in the **OMR Sheet given inside the Booklet only.** If you mark your response at any place other than in the circle in the OMR Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your Name, Roll Number, Phone Number or put any mark on any part of the OMR Sheet, except for the space allotted for the relevant entries, which may disclose your identity, or use abusive language or employ any other unfair means, such as change of response by scratching or using white fluid, you will render yourself liable to disqualification.
9. You have to return the Original OMR Sheet to the invigilators at the end of the examination compulsorily and must not carry it with you outside the Examination Hall. You are, however, allowed to carry original question booklet and duplicate copy of OMR Sheet on conclusion of examination.
10. **Use only Black Ball point pen provided by C.B.S.E.**
11. **Use of any calculator or log table etc., is prohibited.**
12. **There is no negative marks for incorrect answers.**

## परीक्षार्थियों के लिए निर्देश

1. इस पृष्ठ के ऊपर नियत स्थान पर अपना रोल नम्बर लिखिए ।
2. इस प्रश्न-पत्र में पचहत्तर बहुविकल्पीय प्रश्न हैं ।
3. परीक्षा प्रारम्भ होने पर, प्रश्न-पुस्तिका आपको दे दी जायेगी । पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   (i) प्रश्न-पुस्तिका खोलने के लिए पुस्तिका पर लगी कागज की सील को फाड़ लें । खुली हुई या बिना स्टीकर-सील की पुस्तिका स्वीकार न करें ।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं । दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें । इसके लिए आपको पाँच मिनट दिये जायेंगे । उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा ।**
   (iii) इस जाँच के बाद प्रश्न-पुस्तिका का नंबर OMR पत्रक पर अंकित करें और OMR पत्रक का नंबर इस प्रश्न-पुस्तिका पर अंकित कर दें ।
4. प्रत्येक प्रश्न के लिए चार उत्तर विकल्प (1), (2), (3) तथा (4) दिये गये हैं । आपको सही उत्तर के वृत्त को पेन से भरकर काला करना है जैसा कि नीचे दिखाया गया है :
   **उदाहरण** : ① ② ● ④
   जबकि (3) सही उत्तर है ।
5. प्रश्नों के उत्तर **केवल प्रश्न पुस्तिका के अन्दर दिये गये OMR पत्रक पर ही** अंकित करने हैं । यदि आप OMR पत्रक पर दिये गये वृत्त के अलावा किसी अन्य स्थान पर उत्तर चिह्नांकित करते हैं, तो उसका मूल्यांकन नहीं होगा ।
6. अन्दर दिये गये निर्देशों को ध्यानपूर्वक पढ़ें ।
7. कच्चा काम (Rough Work) इस पुस्तिका के अन्तिम पृष्ठ पर करें ।
8. यदि आप OMR पत्रक पर नियत स्थान के अलावा अपना नाम, रोल नम्बर, फोन नम्बर या कोई भी ऐसा चिह्न जिससे आपकी पहचान हो सके, अंकित करते हैं अथवा अभद्र भाषा का प्रयोग करते हैं, या कोई अन्य अनुचित साधन का प्रयोग करते हैं, जैसे कि अंकित किये गये उत्तर को मिटाना या सफेद स्याही से बदलना तो परीक्षा के लिये अयोग्य घोषित किये जा सकते हैं ।
9. आपको परीक्षा समाप्त होने पर मूल OMR पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें । हालांकि आप परीक्षा समाप्ति पर मूल प्रश्न-पुस्तिका तथा OMR पत्रक की डुप्लीकेट प्रति अपने साथ ले जा सकते हैं ।
10. **केवल C.B.S.E. द्वारा प्रदान किये गये काले बाल प्वाईंट पेन का ही इस्तेमाल करें ।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है ।**
12. **गलत उत्तरों के लिए कोई नकारात्मक अंक नहीं हैं ।**

## KANNADA
## Paper – III

**Note :** This paper contains **seventy five (75)** objective type questions of **two (2)** marks each. **All** questions are compulsory.

**ಏಕ ಆಯ್ಕೆ ಮಾದರಿಯ ಪ್ರಶ್ನೆಗಳು :**

**1.** ಕಪ್ಪೆ ಅರಭಟ್ಟನ ಬಾದಾಮಿ ಶಾಸನದಲ್ಲಿ ಬಳಕೆಯಾದ ತ್ರಿಪದಿಗಳ ಸಂಖ್ಯೆ

(1) ಎರಡು (2) ನಾಲ್ಕು
(3) ಮೂರು (4) ಒಂದು

**2.** ಒಂದು ಭಾಷೆಯ ಅರ್ಥಪೂರ್ಣವಾದ ಘಟಕ

(1) ಧ್ವನಿಮಾ (2) ಆಕೃತಿಮಾ
(3) ಸ್ವನಿಮಾ (4) ಪದ

**3.** 'ನಿದ್ರಿಸುವ ಕತ್ತಲೆಯೆ ಕನಸಿಡುವ ತಿಳಿ ಬೆಳಕೆ ಜಾಗೃತದ ಕಿಚ್ಚೆ ನೀನಾರೆ ಹೇಳು' ಈ ಸಾಲುಗಳನ್ನು ಬರೆದ ಕವಿ

(1) ಮಧುರ ಚೆನ್ನ (2) ಡಿ.ವಿ.ಜಿ.
(3) ಸಿದ್ಧಲಿಂಗಯ್ಯ (4) ಬಿ.ಎಂ. ಶ್ರೀಕಂಠಯ್ಯ

**4.** 'ಪರ್ಪಸ್' ನಾಟಕವನ್ನು ಬರೆದವರು

(1) ಪರ್ವತವಾಣಿ (2) ಲಂಕೇಶ್
(3) ಗಿರೀಶ್ ಕಾರ್ನಾಡ್ (4) ಕೈಲಾಸಂ

**5.** ಸಂಸ್ಕೃತದೊಡನೆ ಹೋಲಿಸಿದಾಗ ಇದೊಂದು ದ್ರಾವಿಡ ಭಾಷಾ ವೈಲಕ್ಷಣ್ಯ

(1) ನಾಮಪದಗಳಿಗೆ ಎರಡು ವಚನಗಳಲ್ಲಿಯೂ ಒಂದೇ ವಿಧವಾದ ಪ್ರತ್ಯಯಗಳಿವೆ
(2) ಕರ್ತರಿ ಪ್ರಯೋಗ
(3) ಕೃತ್ ಪ್ರತ್ಯಯಗಳು
(4) ತದ್ಧಿತ ಪ್ರತ್ಯಯಗಳು

**6.** 'ಕೆಡಹಿ ರಿಪುವನು ಘರುಳ ದಂಡೆಯ
ಮುಡಿಸುವೆನು ಮಾನಿನಿಗೆ ರಕುತವ'
ಕುಮಾರ ವ್ಯಾಸನ ಈ ಮಾತು ಬರುವ ಪರ್ವ

(1) ಸಭಾ ಪರ್ವ (2) ಯುದ್ಧ ಪರ್ವ
(3) ಉದ್ಯೋಗ ಪರ್ವ (4) ಕರ್ಣ ಪರ್ವ

**7.** ಐದು ಮಾತ್ರೆಗಳ ಗಣ ವಿನ್ಯಾಸವಿರುವ ಷಟ್ಪದಿ

(1) ಭಾಮಿನಿ (2) ವಾರ್ಧಕ
(3) ಪರಿವರ್ಧಿನಿ (4) ಭೋಗ

**8.** 'ಮುತ್ತಿನ ಪೆಂಡೆಯಂ ಮುರಹರಂ ಕನಕಾದ್ರಿಯೊಳಂದು ಶೇಷನ ಸುತ್ತಿದ ಭಂಗಿಯಿಂದ ಮೆಸೆದಿರ್ಪುದು.' ಈ ವಾಕ್ಯ ಬರುವ ಶಾಸನ

(1) ದೇಕಬ್ಬೆಯ ಶಾಸನ (2) ಜಿನವಲ್ಲಭನ ಶಾಸನ
(3) ಗೊಮ್ಮಟ ಸ್ತುತಿ (4) ಕುವರಲಕ್ಷ್ಮನ ಶಾಸನ

9. ‘ಕಾಲಾತೀತ’ ಕವನವು ಈ ವಿಭಾಗದಲ್ಲಿ ಸೇರುತ್ತದೆ.

(1) ಕಥನ ಕವನ (2) ಚೌಪದಿ

(3) ಸುನೀತ (4) ಭಾವಗೀತೆ

10. ಕ್ಷೇಮೇಂದ್ರನು ಬರೆದ ಕಾವ್ಯಮೀಮಾಂಸಾ ಗ್ರಂಥ

(1) ಕವಿಕಂಠಾಭರಣ (2) ಕಾವ್ಯಮೀಮಾಂಸಾ

(3) ಕಾವ್ಯಪ್ರಕಾಶ (4) ಕಾವ್ಯಾಲಂಕಾರ ಸೂತ್ರವೃತ್ತಿ

11. ಕಾಯ ಬಲಿದಡೆ ಮಾಯೆ ಬಲಿವುದು , ಮಾಯೆ ಬಲಿದಡೆ ಛಾಯೆ ಬಲಿವುದು
ಕಾಯಾ ಮಾಯಾ ಛಾಯಾ ಬಲಿದಡೆ ಸಿದ್ಧನವನಲ್ಲ ! ಈ ಮಾತು ಬರುವ ಭಾಗ :

(1) ಅಕ್ಕನ ವಚನ (2) ಚಾಮರಸನ ಪ್ರಭುಲಿಂಗಲೀಲೆ

(3) ಅಲ್ಲಮನ ವಚನ (4) ರಾಘವಾಂಕನ ಹರಿಶ್ಚಂದ್ರಕಾವ್ಯ

12. ಕೆಳಗೆ ನೀಡಿರುವ ಭಾಷಾಂತರ ಬಗೆಗಳಲ್ಲಿ ಮೂಲಕ್ಕೆ ಅತ್ಯಂತ ದೂರವಾದ ಭಾಷಾಂತರ ಬಗೆ

(1) ಶಬ್ದಾನುವಾದ (2) ನಿಕಟಾನುವಾದ

(3) ಅರ್ಥಾನುವಾದ (4) ರೂಪಾಂತರ

13. ಶ್ರೀಹರ್ಷನ ರತ್ನಾವಳಿಯನ್ನು ಕನ್ನಡಕ್ಕೆ ಅನುವಾದಿಸಿದವರು

(1) ಶ್ರೀಕಂಠೇಶಗೌಡ (2) ಎಚ್.ಎಸ್. ಶಿವಪ್ರಕಾಶ್

(3) ಬಸವಪ್ಪ ಶಾಸ್ತ್ರಿ (4) ಚಂದ್ರಶೇಖರ ಕಂಬಾರ

14. ‘ವಡ್ಡಾರಾಧನೆ’ ಕೃತಿಗೆ ಬಹುಶಃ ಪ್ರೇರಕರಾದವರು

(1) ಹರಿಷೇಣ (2) ಶಿವಕೋಟಿ

(3) ಬ್ರಾಜಿಷ್ಣು (4) ಶ್ರೀ ವಿಜಯ

15. ‘ಬಳಸಿ ಸುೞಿದಾಡಿ ಕಾಲ್ವಿಡಿ
ದೆಳಸಿ ಕಲಾಲಾಪಮೊದವೆ ಜನನಿಯ ಮೊಲೆವಾ
ಲ್ಗಳನುಂಬ ಶಿಶುಗಳಂತಿರೆ
ಕಳವೆಯ ಪಾಲ್ದೆನೆಯ ಪಾಲನುಂಡುವು ಗಿಳಿಗಳ್’
ಇಲ್ಲಿರುವ ಅಲಂಕಾರ :

(1) ಶ್ಲೇಷೆ (2) ರೂಪಕ

(3) ಉತ್ಪ್ರೇಕ್ಷೆ (4) ಉಪಮೆ

16. ಆತಕೂರು ಶಾಸನವು

(1) ಗಂಗರ ಎರೆಯಪ್ಪನ ಕಾಲ (2) ರಾಷ್ಟ್ರಕೂಟ ಕೃಷ್ಣನ ಕಾಲ

(3) ರಾಷ್ಟ್ರಕೂಟ ನಾಲ್ಕನೆ ಗೋವಿಂದನ ಕಾಲ (4) ಚಾಲುಕ್ಯರ ಇರಿವ ಬೆಡಂಗನ ಕಾಲ

17. ಕನ್ನಡ ಲಿಪಿಯ ಬೆಳವಣಿಗೆಯಲ್ಲಿ ಚೌಕಾಕೃತಿಯ ತಲೆಕಟ್ಟು ಬಂದ ಕಾಲ

(1) ಮೂರನೆಯ ಶತಮಾನ (2) ಏಳನೆಯ ಶತಮಾನ

(3) ಐದನೆಯ ಶತಮಾನ (4) ನಾಲ್ಕನೆಯ ಶತಮಾನ

18. 'ಪ್ರಚುರದಿ ಪದಿನೆಂಟು ರಚನೆಯ ವಾಕ್ಯಕೆ
ರಚಿಸುವರಾನಂತು ಪೇಳೆ |
ಉಚಿತಕೆ ತಕ್ಕಷ್ಟು ಪೇಳ್ವೆನಧ್ಯಾತ್ಮವೆ
ನಿಚಿತಪ್ರಯೋಜನವೆನಗೆ ||' ಇದು ಯಾವ ಬಂಧದಲ್ಲಿದೆ ?

(1) ಸಾಂಗತ್ಯ (2) ತ್ರಿಪದಿ

(3) ರಗಳೆ (4) ಸೆನೆಟ್

19. 'ತಾಂಡವಾಡಂಬರದೊಳ್ ನಾನಾವಿಧಂ ನರ್ತಿಪ ನಟನ ಭುಜಾದಂಡಮೊ
ಪೇಚಿಮೆಂಬಂತಿರೆ ಅಮೇಯ ಸ್ಕಂಧಮುಂ ಸಂಧಿಸಿ ಜರಠ ಮಹಾ
ಶಾಲ್ಮಲೀ ವೃಕ್ಷಮಿರ್ಕುಂ' ಈ ವರ್ಣನೆಯು ಬರುವ ಕಾವ್ಯ

(1) ಮಲ್ಲಿನಾಥ ಪುರಾಣ (2) ವಿಕ್ರಮಾರ್ಜುನ ವಿಜಯ

(3) ಗಧಾಯುದ್ಧ (4) ಕಾದಂಬರಿ

20. ಕನ್ನಡದಲ್ಲಿ ಬಂದ 'ಅಭಿಜ್ಞಾನ ಶಾಕುಂತಲ' ದ ಮೊದಲ ಅನುವಾದ

(1) ಬಸವಪ್ಪ ಶಾಸ್ತ್ರಿ (2) ಚುರಮುರಿ ಶೇಷಗಿರಿರಾಯರು

(3) ಕೆ. ಕೃಷ್ಣಮೂರ್ತಿ (4) ಎಸ್.ವಿ. ಪರಮೇಶ್ವರಭಟ್ಟ

21. ಕೆಳಗೆ ನೀಡಿರುವ ಪ್ರಬೇಧಗಳಲ್ಲಿ ತೌಲನಿಕತೆ ಇಲ್ಲದಿರುವ ಪ್ರಬೇಧ ಯಾವುದು ?

(1) ಸಾದೃಶ್ಯ ವಿಶ್ಲೇಷಣೆ (2) ಪ್ರಭಾವ ವಿಶ್ಲೇಷಣೆ

(3) ಪಠ್ಯಕೇಂದ್ರಿತ ವಿಶ್ಲೇಷಣೆ (4) ಸಮಾನತೆ ಹಾಗೂ ಭಿನ್ನತೆಗಳ ವಿಶ್ಲೇಷಣೆ

22. 'ವಿಶಾಖ-ಯವಕ್ರೀತ ' ಈ ಪಾತ್ರಗಳು ಯಾವ ನಾಟಕದಲ್ಲಿ ಬರುತ್ತವೆ ?

(1) ಅಗ್ನಿ ಮತ್ತು ಮಳೆ (2) ಸಂಕ್ರಾಂತಿ

(3) ವಿಗಡ ವಿಕ್ರಮರಾಯ (4) ಮಹಾಚೈತ್ರ

23. 'ಗೊರವರು' ಯಾವ ದೇವತಾ ಪರಂಪರೆಗೆ ಸಂಬಂಧಿಸಿದವರು

(1) ಸಿದ್ಧಪ್ಪಾಜಿ (2) ಗೋರಖನಾಥ

(3) ಪಶುಪತಿ (4) ಮೈಲಾರಲಿಂಗ

24. ವರ್ಗೀಯ ವ್ಯಂಜನಗಳಲ್ಲಿ ಘೋಷ-ಅಘೋಷ ಎಂಬ ವ್ಯತ್ಯಾಸವನ್ನು ಪರಿಗಣಿಸದ ಭಾಷೆ

(1) ತುಳು (2) ತಮಿಳು

(3) ಕನ್ನಡ (4) ತೆಲುಗು

**25.** ದಕ್ಷಿಣೋತ್ತರ ಮಾರ್ಗಗಳು ಕನ್ನಡದ ಯಾವ ಪ್ರಬೇಧಗಳನ್ನು ಸೂಚಿಸುತ್ತವೆ ?

(1) ಸಾಮಾಜಿಕ ಉಪಭಾಷೆಗಳು

(2) ಸಂಸ್ಕೃತದಿಂದ ಪ್ರಭಾವಿತವಾದ ವಿಭಿನ್ನ ರೂಪಗಳು

(3) ಶಿಷ್ಟಭಾಷೆಯ ಪ್ರಾದೇಶಿಕ ರೂಪಗಳು

(4) ಪ್ರಾದೇಶಿಕ ಉಪಭಾಷೆಗಳು

**26.** ರೂಪಕೇಂದ್ರಿತವಾದ ಸಾಹಿತ್ಯ ವಿಮರ್ಶೆಯ ಪಂಥ

(1) ರಾಚನಿಕ (2) ರೊಮ್ಯಾಂಟಿಕ್

(3) ವಸಾಹತೋತ್ತರ (4) ಸ್ತ್ರೀವಾದಿ

**27.** 'ಸ್ತ್ರೀ ಶಿಕ್ಷಣ' ವನ್ನು ಕುರಿತ ಕಾದಂಬರಿ

(1) ಶರಪಂಜರ (2) ಹೃದಯ ಗೀತ

(3) ದೂರದ ಬೆಟ್ಟ (4) ಅಪಜಯ

**28.** ಥಾಂಮ್ಸ್‌ನ 'ಫೋಕ್ ಲೋರ್' ಎಂಬ ಪರಿಕಲ್ಪನೆ ರೂಪುಗೊಂಡ ವರ್ಷ

(1) 1835 (2) 1846

(3) 1850 (4) 1857

**29.** 'ಪ್ರೈಮರಿ ಇಮ್ಯಾಜಿನೇಶನ್' ಮತ್ತು 'ಸೆಕೆಂಡರಿ ಇಮ್ಯಾಜಿನೇಶನ್' ಎಂದು ಪ್ರತಿಭೆಯಲ್ಲಿ ಎರಡು ಹಂತಗಳನ್ನು ಕಂಡವನು :

(1) ಸಿ.ಡೆ. ಲೂಯಿ (2) ಅರಿಸ್ಟಾಟಲ್

(3) ಕೋಲ್‌ರಿಜ್ (4) ಎಡ್ವರ್ಡ್ ಬುಲ್ಲೋ

**30.** 'ಕುಮುದಿನಿ' ಐತಿಹಾಸಿಕ ಕಾದಂಬರಿಯ ಕರ್ತೃ :

(1) ಗಳಗನಾಥ (2) ಮಾಸ್ತಿ

(3) ಕೆ.ವಿ.ಅಯ್ಯರ್ (4) ಬಿ. ವೆಂಕಟಾಚಾರ್ಯ

**31.** ವಸಾಹತೋತ್ತರ ಸಾಹಿತ್ಯ ವಿಮರ್ಶೆಯ ಪ್ರಮುಖ ಚಿಂತಕ

(1) ವಾಲ್ಟರ್ ಬೆಂಜಮಿನ್ (2) ಬ್ರೆಕ್ಟ್

(3) ರೋಲಾಬಾರ್ಥ್ (4) ಎಡ್ವರ್ಡ್ ಸಯಿದ್

**32.** ಕೆಳಗೆ ನೀಡಿರುವ ಜೋಡಿಗಳಲ್ಲಿ ಅಧಿದೈವದ ದೃಷ್ಟಿಯಿಂದ ಸರಿಯಾದ ಹೊಂದಾಣಿಕೆ ಇರುವ ಜೋಡಿ ಯಾವುದು ?

(1) ನೀಲಗಾರರು – ಮಲೆ ಮಾದೇಶ್ವರ

(2) ಗೊಂದಲಿಗರು – ಅಂಬಾಭವಾನಿ

(3) ಕಿನ್ನರಿ ಜೋಗಿಗಳು – ಮೈಲಾರಲಿಂಗ

(4) ಕಂಸಾಳೆಯವರು – ಮಂಟೇಸ್ವಾಮಿ

33. ‘ಬೀದಿಯ ತೊಟ್ಟಿಗಳ ಎಂಜಲೆಲೆಗಳಿಂದ ಅಳಿದುಳಿದ ಆಹಾರಗಳನ್ನು ತಿಂದು ಬದುಕುವ ಹುಡುಗರ ತಂಡದ ಕತೆ’ ಇರುವ ಕಾದಂಬರಿ

(1) ಮಾಡಿ ಮಡಿದವರು (2) ಅರಮನೆ

(3) ಪುರುಷಾವತಾರ (4) ಬಂಡಾಯ

34. ದ್ರಾವಿಡ ಭಾಷೆಗಳ ಕ್ರಿಯಾ ಪದಗಳಲ್ಲಿರುವ ಕಾಲಗಳ ಸಂಖ್ಯೆ

(1) ಎರಡು (2) ಮೂರು

(3) ನಾಲ್ಕು (4) ಐದು

35. ಕನ್ನಡದ ಪ್ರಾಚೀನತೆಗೆ ಒಂದು ದಾಖಲೆ ಎನಿಸಿದ ‘ಇಸಿಲ’ ಎಂಬ ಪದ ಎಲ್ಲಿ ಕಂಡು ಬರುತ್ತದೆ ?

(1) ಶಿಲಪ್ಪದಿಗಾರಂ ಎಂಬ ತಮಿಳು ಕಾವ್ಯ (2) ಗ್ರೀಕ್ ಪ್ರವಾಸಿ ಟಾಲೆಮಿಯ ಪ್ರವಾಸ ಕಥನ

(3) ವ್ಯಾಸ ಕೃತ ಮಹಾಭಾರತ (4) ಅಶೋಕನ ಬ್ರಹ್ಮಗಿರಿಯ ಶಾಸನ

36. ಕಾಮವನ್ನು ಕೇಂದ್ರ ವಸ್ತುವಾಗಿಟ್ಟು ರಚಿಸಿದ ಸಣ್ಣ ಕತೆ :

(1) ನಾಲ್ಕು ಮೊಳ ಭೂಮಿ (2) ಸೆರೆ

(3) ಆಚಾರವಂತ ಅಯ್ಯಂಗಾರ್‍ರು (4) ಗ್ರಸ್ಥರು

37. ‘ಬಿಗಿದಮರ್ದಿರ್ದ ತೋಳ್ ಸಡಿಲೆ ಜೋಲೆಮೊಗಂ ಮೊಗದಿಂದ ಮೊಯ್ಯನೊ’ ಇದು ಯಾವ ಛಂದಸ್ಸಿಗೆ ಉದಾಹರಣೆಯಾಗಿದೆ ?

(1) ಉತ್ಪಲಮಾಲಾ (2) ಮಹಾಸ್ರಗ್ಧರ

(3) ಚಂಪಕಮಾಲಾ (4) ಶಾರ್ದೂಲ ವಿಕ್ರೀಡಿತ

38. ಯಕ್ಷಗಾನ ಕವಿ ‘ಪಾರ್ತಿ ಸುಬ್ಬ’ ನ ಕುರಿತು ಕೃತಿ ರಚಿಸಿದವರು :

(1) ಮುಳಿಯ ತಿಮ್ಮಪ್ಪಯ್ಯ (2) ಎಲ್.ಆರ್. ಹೆಗಡೆ

(3) ಶಿವರಾಮ ಕಾರಂತ (4) ಕುಶಾಲಪ್ಪ ಗೌಡ

39. ಎ.ಕೆ. ರಾಮಾನುಜನ್ ಅವರು ರಚಿಸಿದ ಕವಿತೆ

(1) ಅಕ್ಕ ತಮ್ಮ (2) ಕುಮಾರ ಗಂಧರ್ವ

(3) ಬೋಳು ಮರ (4) ಕುಂಟೋ ಬಿಲ್ಲೆ

40. ‘ಕಾದಂಬರಿ : ವಸ್ತು ಮತ್ತು ತಂತ್ರ’ ಕೃತಿ ರಚನೆ ಮಾಡಿದವರು

(1) ಜಿ.ಎಚ್. ನಾಯಕ (2) ಡಿ.ಆರ್. ನಾಗರಾಜ

(3) ಗಿರಡ್ಡಿ ಗೋವಿಂದರಾಜ (4) ಸಿ.ಎಸ್. ರಾಮಚಂದ್ರನ್

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು :**

**41.** ಇವು ಕನಕದಾಸರ ಕೀರ್ತನೆಯ ಸಾಲುಗಳು :

(a) ತನು ನಿನ್ನದು ಜೀವನ ನಿನ್ನದು

(b) ಇಷ್ಟು ದಿನ ಈ ವೈಕುಂಠ ಎಷ್ಟು ದೂರವೆನ್ನುತ್ತಿದ್ದೆ

(c) ಕಾಯಲಾರೆನು ಕೃಷ್ಣ ಕಂಡವರ ಬಾಗಿಲನು

(d) ಅಪರಾಧಿ ನಾನಲ್ಲ, ಅಪರಾಧವೆನಗಿಲ್ಲ.

ಇವುಗಳಲ್ಲಿ ಸರಿಯಾದ ಉತ್ತರ :

(1) (a) ಮತ್ತು (c)  (2) (a) ಮತ್ತು (b)

(3) (b) ಮತ್ತು (c)  (4) (c) ಮತ್ತು (d)

**42.** ಇವು ಕನ್ನಡ ನವ್ಯಕತೆಗಳು.

(a) ಕ್ಷಿತಿಜ  (b) ಅಮಾಸ

(c) ಕೊನೆಯ ಗಿರಾಕಿ  (d) ಕತೆಯಾದಳು ಹುಡುಗಿ

ಇವುಗಳಲ್ಲಿ ಸರಿಯಾದ ಉತ್ತರ :

(1) (a) ಮತ್ತು (c)  (2) (b) ಮತ್ತು (c)

(3) (c) ಮತ್ತು (d)  (4) (a) ಮತ್ತು (d)

**43.** ಇವು ಕಾಲಾಂತರದಲ್ಲಿ 'ಉತ್ತಮಾರ್ಥ' ಪಡೆದ ಪದಗಳು

(a) ಮರ್ಯಾದೆ, ಸಭ್ಯ  (b) ಗಮಾರ, ಪೆದ್ದ

(c) ಹೊಂದು, ದಿಗ್ಗಜ  (d) ಭದ್ರ, ನಾರು

ಇವುಗಳಲ್ಲಿ ಸರಿಯಾದ ಉತ್ತರ :

(1) (a) ಮತ್ತು (c)  (2) (b) ಮತ್ತು (d)

(3) (c) ಮತ್ತು (d)  (4) (a) ಮತ್ತು (b)

**44.** ಇವು 'ಟೊಳ್ಳುಗಟ್ಟಿ' ನಾಟಕದಲ್ಲಿ ಬರುವ ಪಾತ್ರಗಳು

(a) ಗುಂಡೂರಾಯ – ಹಿರಿಯಣ್ಣಯ್ಯ  (b) ಸಾಮಾನ್ಯಪ್ಪ – ಯುವತಿ

(c) ಭಾಗೀರಥಿ – ನಾಗತ್ತೆ  (d) ರುದ್ರ – ಉಜ್ಜ

ಇವುಗಳಲ್ಲಿ ಸರಿಯಾದ ಉತ್ತರ :

(1) (a) ಮತ್ತು (d)  (2) (b) ಮತ್ತು (c)

(3) (a) ಮತ್ತು (c)  (4) (b) ಮತ್ತು (d)

45. ಇವು ಶೇಕ್ಸ್‌ಪಿಯರ್‌ನ 'ಏಕ ಕವಿಕೃತ' ರೂಪಾಂತರಿತ, ನಾಟಕಗಳು :

(a) ಶೂರಸೇನ ಚರಿತೆ (b) ಬಿರುಗಾಳಿ

(c) ಪ್ರತಾಪರುದ್ರದೇವ (d) ರಕ್ತಾಕ್ಷಿ

ಇವುಗಳಲ್ಲಿ ಸರಿಯಾದ ಉತ್ತರ :

(1) (a) ಮತ್ತು (b) (2) (b) ಮತ್ತು (d)

(3) (b) ಮತ್ತು (c) (4) (c) ಮತ್ತು (d)

46. ಈ ಕಾದಂಬರಿಗಳನ್ನು ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ಗುರುತಿಸಲಾಗುತ್ತದೆ

(a) ನಿಸರ್ಗ, ಮಲೆಗಳಲ್ಲಿ ಮದುಮಗಳು

(b) ಅಕ್ಕ, ಅಂತರಂಗ

(c) ಕಾನೂರು ಹೆಗ್ಗಡಿತಿ, ಬೆಟ್ಟದ ಜೀವ

(d) ಹಂಸಗೀತೆ, ಶಿಖರ ಸೂರ್ಯ

ಇವುಗಳಲ್ಲಿ ಸರಿಯಾದ ಉತ್ತರ

(1) (a) ಮತ್ತು (b) (2) (b) ಮತ್ತು (c)

(3) (a) ಮತ್ತು (c) (4) (b) ಮತ್ತು (d)

47. ಕರ್ನಾಟಕದಲ್ಲಿ ಅಶೋಕನ ಶಾಸನಗಳು ಸಿಕ್ಕ ಸ್ಥಳಗಳು

(a) ಮಸ್ಕಿ, ಜಟಿಂಗ ರಾಮೇಶ್ವರ (b) ಮಸ್ಕಿ, ಹಾನಗಲ್ಲು

(c) ಸಿದ್ಧಾಪುರ, ಕೊಪ್ಪಳ (d) ಬಾದಾಮಿ, ಲಕ್ಕುಂಡಿ

ಇವುಗಳಲ್ಲಿ ಸರಿಯಾದ ಉತ್ತರ

(1) (a) ಮತ್ತು (c) (2) (a) ಮತ್ತು (b)

(3) (c) ಮತ್ತು (d) (4) (b) ಮತ್ತು (c)

48. 'ಹಾರ್ಮೋನಿಯಂ' ಬಳಕೆಯಾಗುವ ಜನಪದ ಪ್ರದರ್ಶನ ರೂಪಗಳು

(a) ಸಣ್ಣಾಟ (b) ಕೃಷ್ಣ ಪಾರಿಜಾತ

(c) ಮೂಡಲಪಾಯ (d) ತೊಗಲು ಗೊಂಬೆಯಾಟ

ಇವುಗಳಲ್ಲಿ ಸರಿಯಾದ ಉತ್ತರ

(1) (a) ಮತ್ತು (c) (2) (a) ಮತ್ತು (b)

(3) (c) ಮತ್ತು (d) (4) (b) ಮತ್ತು (c)

**49.** ಇವು ಹೊಸಗನ್ನಡ ಛಂದೋರೂಪಗಳು

(a) ಸರಳ ರಗಳೆ (b) ತ್ರಿಪದಿ

(c) ಮಹಾ ಛಂದಸ್ಸು (d) ಏಳೆ

ಇವುಗಳಲ್ಲಿ ಸರಿಯಾದ ಉತ್ತರ

(1) (b) ಮತ್ತು (c) (2) (a) ಮತ್ತು (d)

(3) (a) ಮತ್ತು (c) (4) (b) ಮತ್ತು (d)

**50.** ಇವು ಕನ್ನಡದಲ್ಲಿರುವ 'ಕಾವ್ಯ ಲಕ್ಷಣ' ಗ್ರಂಥಗಳು

(a) ಉದಯಾದಿತ್ಯಾಲಂಕಾರ, ರಸರತ್ನಾಕರ

(b) ಅಪ್ರತಿಮ ವೀರಚರಿತ, ಕಾವ್ಯಾವಲೋಕನ

(c) ರಸರತ್ನಾಕರ, ಕಾವ್ಯ ಪ್ರಕಾಶ

(d) ಕಾವ್ಯಾವಲೋಕನ, ಕಾವ್ಯಾಲಂಕಾರ

ಇವುಗಳಲ್ಲಿ ಸರಿಯಾದ ಉತ್ತರ

(1) (a) ಮತ್ತು (b) (2) (c) ಮತ್ತು (d)

(3) (b) ಮತ್ತು (d) (4) (a) ಮತ್ತು (c)

**ಹೇಳಿಕೆ – ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ :**

**51.** **ಹೇಳಿಕೆ :** ಧ್ವನಿಯೆಂಬುದಳಂಕಾರಂ ಧ್ವನಿಯಿಸುಗುಂ, ಅರ್ಥದಿಂದಂ ಶಬ್ದದಿಂದೆ ದೂಷ್ಯಂ

**ವಿವರಣೆ :** ಧ್ವನಿಯೆಂಬುದು ಅಲಂಕಾರವಾಗಲಾರದು, ಏಕೆಂದರೆ ಪದಗಳಿಂದ ಸ್ಫುರಿಸಲ್ಪಡುವ ಅರ್ಥವು ಗ್ರಾಹ್ಯವಾಗಲಾರದು.

(1) ಹೇಳಿಕೆ ಸರಿ, ವಿವರಣೆ ಸರಿ (2) ಹೇಳಿಕೆ ತಪ್ಪು, ವಿವರಣೆ ಸರಿ

(3) ಹೇಳಿಕೆ ಸರಿ, ವಿವರಣೆ ತಪ್ಪು (4) ಹೇಳಿಕೆ ತಪ್ಪು, ವಿವರಣೆ ತಪ್ಪು

**52.** **ಹೇಳಿಕೆ :** 'ಪರಪದಪೂರ್ವಂ ದ್ವಿತ್ವಾಕ್ಷರಮಾಗಿರೆ ಪೂರ್ವಪದದ

ಚರಮಂ ಹ್ರಸ್ವಾಕ್ಷರ ಮಾಗಿರೆ ಸಂಧಿದೋಷ'

**ವಿವರಣೆ :** ಉತ್ತರಪದದ ಕೊನೆಯಲ್ಲಿ ಒತ್ತಕ್ಷರವಿದ್ದು, ಪೂರ್ವಪದದ

ಕೊನೆಯಲ್ಲಿ ಹ್ರಸ್ವಾಕ್ಷರವಿದ್ದರೆ ಸಂಧಿದೋಷವಾಗುವುದಿಲ್ಲ.

(1) ಹೇಳಿಕೆ ತಪ್ಪು, ವಿವರಣೆ ತಪ್ಪು (2) ಹೇಳಿಕೆ ಸರಿ, ವಿವರಣೆ ತಪ್ಪು

(3) ಹೇಳಿಕೆ ಸರಿ, ವಿವರಣೆ ಸರಿ (4) ಹೇಳಿಕೆ ತಪ್ಪು, ವಿವರಣೆ ಸರಿ

53. ಹೇಳಿಕೆ : ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ
ಇರುಳೆಲ್ಲಾ ನಡೆದನಾ ಸುಂಕಕ್ಕಂಜಿ :
ವಿವರಣೆ : ವಿವೇಚನೆ ಇಲ್ಲದೆ ಮಾಡಿದ ಕಾರ್ಯದ ಸ್ವರೂಪ

(1) ಹೇಳಿಕೆ ತಪ್ಪು, ವಿವರಣೆ ಸರಿ
(2) ಹೇಳಿಕೆ ತಪ್ಪು, ವಿವರಣೆ ತಪ್ಪು
(3) ಹೇಳಿಕೆ ಸರಿ, ವಿವರಣೆ ತಪ್ಪು
(4) ಹೇಳಿಕೆ ಸರಿ, ವಿವರಣೆ ಸರಿ

54. ಹೇಳಿಕೆ : ಅತ್ತಿಮಬ್ಬೆಗೆ ಪಥಶ್ರಮಮಾದೊಡಕಾಳವೃಷ್ಟಿಯಾಯ್ತಿನ್ನವು
ದೇವಭಕ್ತಿಗದು ಚೋದ್ಯಮೆ :
ವಿವರಣೆ : ದೇವತೆಗಳು ಆಶ್ಚರ್ಯಪಡುವಂತೆ ಅತ್ತಿಮಬ್ಬೆಗೆ ಬರಬಾರದ ಕಾಲದಲ್ಲಿ
ಮಳೆ ಬಂದು ತೊಂದರೆಯಾಯಿತು.

(1) ಹೇಳಿಕೆ ಸರಿ, ವಿವರಣೆ ತಪ್ಪು
(2) ಹೇಳಿಕೆ ತಪ್ಪು, ವಿವರಣೆ ತಪ್ಪು
(3) ಹೇಳಿಕೆ ಸರಿ, ವಿವರಣೆ ಸರಿ
(4) ಹೇಳಿಕೆ ತಪ್ಪು, ವಿವರಣೆ ಸರಿ

55. ಹೇಳಿಕೆ : ಜಗವೆಲ್ಲ ಮುದ್ದಿಸಬೇಕೆಂದು ಕೊರಗದಿರು
ಮಗುವು ಪೆತ್ತರ್ಗೆ ನೀಂ, ಲೋಕಕೆ ಸ್ಪರ್ಧಿ
ವಿವರಣೆ : ಎಲ್ಲರ ಪ್ರೀತಿಗೆ ಪಾತ್ರರಾಗಬೇಕೆಂದು
ಹಂಬಲಿಸಬೇಕಾಗಿಲ್ಲ, ಜಗತ್ತಿನ ವಿಭಿನ್ನ
ಜನರ ನಡುವೆ ಬದುಕ ರೂಪಿಸಬೇಕು

(1) ಹೇಳಿಕೆ ತಪ್ಪು, ವಿವರಣೆ ಸರಿ
(2) ಹೇಳಿಕೆ ತಪ್ಪು, ವಿವರಣೆ ತಪ್ಪು
(3) ಹೇಳಿಕೆ ಸರಿ, ವಿವರಣೆ ಸರಿ
(4) ಹೇಳಿಕೆ ಸರಿ, ವಿವರಣೆ ತಪ್ಪು

**ಬಹು ಆಯ್ಕೆಯ ಜೋಡಣೆಯ ಮಾದರಿ :**

56.
(a) ದೇಕಬ್ಬೆಯ ಶಾಸನ — (i) ಕಲ್ಯಾಣಿ ಚಾಲುಕ್ಯ (ತ್ರೈಲೋಕ್ಯಮಲ್ಲ)
(b) ನಾಗಾಯಿ ಶಾಸನ — (ii) ಕಲ್ಯಾಣಿ ಚಾಲುಕ್ಯ (ಇರಿವ ಬೆಡಂಗ)
(c) ಲಕ್ಕುಂಡಿ ಶಾಸನ — (iii) ಚೋಳ
(d) ಕುವರಲಕ್ಷ್ಮನ ವೀರಗಲ್ಲು — (iv) ರಾಷ್ಟ್ರಕೂಟ
(v) ಹೊಯ್ಸಳ

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (1) | (iii) | (ii) | (v) | (i) |
| (2) | (iii) | (i) | (ii) | (v) |
| (3) | (i) | (ii) | (iii) | (iv) |
| (4) | (ii) | (i) | (iv) | (iii) |

**57.** (a) ವಂಶವೃಕ್ಷ (i) ಬಸವರಾಜ, ಪ್ರೊಫೆಸರ್ ರಂಗಯ್ಯ

(b) ವೈಶಾಖ (ii) ನಿರ್ಮಲೆ, ವಾಸುದೇವ

(c) ವಿಕ್ಷೇಪ (iii) ಲಕ್ಕ, ರುಕ್ಮಿಣಿ

(d) ಮೂರು ದಾರಿಗಳು (iv) ಶ್ರೋತ್ರಿಯರು, ಸದಾಶಿವರಾಯರು

(v) ರಾಹುಲ, ಮಾಧವಿ

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (1) | (iv) | (iii) | (ii) | (v) |
| (2) | (ii) | (iv) | (i) | (iii) |
| (3) | (iii) | (v) | (ii) | (i) |
| (4) | (iv) | (iii) | (v) | (ii) |

**58.** (a) ಇರಂಡು (i) ಬ್ರಾಹುಈ

(b) ರೆಂಡು (ii) ತುಳು

(c) ರಂಡು (iii) ತಮಿಳು

(d) ರಡ್ಡು (iv) ಮಲಯಾಳ

(v) ತೆಲುಗು

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (1) | (iii) | (v) | (iv) | (ii) |
| (2) | (ii) | (i) | (v) | (iii) |
| (3) | (iii) | (ii) | (i) | (v) |
| (4) | (i) | (iii) | (ii) | (iv) |

**59.** (a) ಮೋಗ್ಲಿಂಗ್ (i) ಒಗಟುಗಳು

(b) ಮೆರಿಫ್ರೆರ್ (ii) ಜನಪದ ಗೀತೆಗಳು

(c) ಗೋವರ್ (iii) ಗಾದೆಗಳು

(d) ಫ್ಲೀಟ್ (iv) ಜನಪದ ಕತೆಗಳು

(v) ಲಾವಣಿಗಳು

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (1) | (iii) | (v) | (i) | (iv) |
| (2) | (iii) | (iv) | (ii) | (v) |
| (3) | (iv) | (ii) | (iii) | (i) |
| (4) | (i) | (v) | (iv) | (ii) |

**60.** (a) 'ನಮ್ಮ ಸಮಾಜ ರಚನೆಯೇ ತಪ್ಪಿದೆ' (i) ತುಘಲಕ್

(b) 'ಸೂರ್ಯ ಅರಮನೆ, ದೇವಸ್ಥಾನಗಳ ಮೇಲೆ ಮಾತ್ರ ಬೆಳಗುವುದಿಲ್ಲ' (ii) ಟೊಳ್ಳುಗಟ್ಟಿ

(c) 'ನಿಜವಾದ ಅರಸು ಮನುಷ್ಯನಾಗಿದ್ದೇ ದೊಡ್ಡವನಾಗಬೇಕು' (iii) ಸಂಕ್ರಾಂತಿ

(d) 'ನಾಯಿಗ್ಹಾಕಿದ್ನಿನ್ಜನ್ಮದುಚ್ಛಿಷ್ಟಾನ್ನರೀಗ್ಹಾಕ' (iv) ಕತ್ತಲೆ ಬೆಳಕು

(v) ಹರಕೆಯ ಕುರಿ

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (1) | (iv) | (i) | (ii) | (iii) |
| (2) | (i) | (iv) | (v) | (ii) |
| (3) | (iv) | (iii) | (i) | (ii) |
| (4) | (v) | (ii) | (iv) | (i) |

**61.** (a) ಸಮವೃತ್ತ (i) ಛಂದೋವತಂಸ

(b) ಮಾತ್ರಾವೃತ್ತ (ii) ಕಂದ

(c) ಅರ್ಧಸಮವೃತ್ತ (iii) ರಗಳೆ

(d) ಅಂಶ ಛಂದಸ್ಸು (iv) ಉತ್ಪಲಮಾಲ

(v) ಮುಡಿ

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (1) | (iv) | (ii) | (i) | (v) |
| (2) | (ii) | (iii) | (iv) | (i) |
| (3) | (iii) | (v) | (ii) | (iv) |
| (4) | (iv) | (iii) | (ii) | (i) |

**62.** (a) ದಂಡಿ (i) ರಸಾತ್ಮಕವಾದ ವಾಕ್ಯವು ಕಾವ್ಯ

(b) ವಾಮನ (ii) ಕಾವ್ಯಕ್ಕೆ ಧ್ವನಿಯೇ ಆತ್ಮ

(c) ವಿಶ್ವನಾಥ (iii) ರೀತಿಯು ಕಾವ್ಯದ ಆತ್ಮ

(d) ಆನಂದ ವರ್ಧನ (iv) ಶಬ್ದಾರ್ಥಗಳ ಸಮೂಹವೇ ಕಾವ್ಯ

(v) ಹತ್ತು ಗುಣಗಳೇ ಕಾವ್ಯದ ಪ್ರಾಣ

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (1) | (v) | (iii) | (i) | (ii) |
| (2) | (ii) | (v) | (iii) | (i) |
| (3) | (iv) | (ii) | (iii) | (i) |
| (4) | (v) | (i) | (ii) | (iv) |

63. (a) ಪ್ರಿಫೇಸ್ ಟು ಶೇಕ್ಸ್ ಪಿಯರ್ (i) ಐ.ಎ. ರಿಚರ್ಡ್ಸ್
(b) ಪ್ರೈಮರಿ ಇಮ್ಯಾಜಿನೇಶನ್ (ii) ಮ್ಯಾಥ್ಯೂ ಅರ್ನಾಲ್ಡ್
(c) ದಿ ಸ್ಟಡಿ ಆಫ್ ಪೋಯೆಟ್ರಿ (iii) ಅರಿಸ್ಟಾಟಲ್
(d) ಪ್ರಿನ್ಸಿಪಲ್ಸ್ ಆಫ್ ಲಿಟರರಿ ಕ್ರಿಟಿಸಿಸಂ (iv) ಕಾಲ್‌ರಿಜ್
(v) ಸ್ಯಾಮುವೆಲ್ ಜಾನ್ಸನ್

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (1) | (iii) | (iv) | (i) | (ii) |
| (2) | (v) | (iv) | (ii) | (i) |
| (3) | (ii) | (i) | (v) | (iii) |
| (4) | (v) | (iv) | (i) | (ii) |

64. (a) ಎಚ್. ದೇವೀರಪ್ಪ (i) ಛಂದೋಗತಿ
(b) ಸ.ಸ. ಮಾಳವಾಡ (ii) ಪುಸ್ತಕ ಸಂಸ್ಕೃತಿ
(c) ಕೆ.ಜಿ. ಕುಂದಣಗಾರ (iii) ಶರಣ ಚರಿತ ಮಾನಸ
(d) ಹಾ.ಮಾ. ನಾಯಕ (iv) ಹರಿಹರನ ರಗಳೆಗಳಲ್ಲಿ ಜೀವನ ದರ್ಶನ
(v) ವಡ್ಡಾರಾಧನೆಯ ಕಾಲದೇಶ

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (1) | (ii) | (i) | (v) | (ii) |
| (2) | (iv) | (v) | (ii) | (iii) |
| (3) | (iii) | (iv) | (v) | (ii) |
| (4) | (iii) | (iv) | (ii) | (v) |

65. (a) ಹರಿಹರ (i) ಹೊರವಂಟನಾಡಂಬರದ ಸಿಡಿಲು ಗಜರಿ ಗರ್ಜಿಸಿ ಮೇಘದಿಂದ ಪೊರಮಡುವಂದದಿ
(b) ರಾಘವಾಂಕ (ii) ಕಡುಪಾತಕಂಗೈದು ಪೆಣ್ಣಾಗಿ ಸಂಭವಿಸಿದೊಡಲಂ ಪೊರೆವುದೆನ್ನೊಳಪರಾಧಮುಂಟು
(c) ಕುಮಾರವ್ಯಾಸ (iii) ಖತಿಯಿಲ್ಲದೆ ಮನದೊಳ್ತಾನಚಿಛಕ್ತಂ ರತ್ನಮಯದ ಮೀನಂ ಬಿಡುತಿದೆ
(d) ಲಕ್ಷ್ಮೀಶ (iv) ಸೊಪ್ಪುಳಾಗದು ಕೈದುವಾಗದು ಒಪ್ಪವಳಿಯದು ಜಂತ್ರ ಜೋಕೆಗೆ
(v) ಕಾವನಾತನೆ ಕೊಲುವನಾತನೆ ಸಾವೆನಾತನ ಕೈಯ ಬಾಯಲಿ

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (1) | (iii) | (i) | (v) | (ii) |
| (2) | (iii) | (v) | (i) | (ii) |
| (3) | (v) | (i) | (iii) | (ii) |
| (4) | (iv) | (i) | (ii) | (v) |

66. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(1) ಛಂದೋನುಶಾಸನ – ಜಯಕೀರ್ತಿ

(2) ಕನ್ನಡ ಛಂದಸ್ಸು – ಟಿ.ವಿ. ವೆಂಕಟಾಚಲಶಾಸ್ತ್ರಿ

(3) ಕನ್ನಡ ಛಂದೋವಿಕಾಸ – ಡಿ.ಎಸ್. ಕರ್ಕಿ

(4) ಛಂದೋಂಬುಧಿ – ಎರಡನೆಯ ನಾಗವರ್ಮ

67. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(1) ಸೇಡಿಯಾಪು ಕೃಷ್ಣಭಟ್ಟ – ಛಂದಸ್ಸು

(2) ಎಸ್.ಜಿ. ನರಸಿಂಹಾಚಾರ್ – ಜಾನಪದ ಅಧ್ಯಯನ

(3) ಕುಶಾಲಪ್ಪಗೌಡ – ಭಾಷಾ ವಿಜ್ಞಾನ

(4) ಸಿ.ಎನ್. ರಾಮಚಂದ್ರನ್ – ಸಾಹಿತ್ಯ ವಿಮರ್ಶೆ

68. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ ?

(1) ಪ್ರಾಯೋಗಿಕ ವಿಮರ್ಶೆ – ಎಡ್ವರ್ಡ್ ಸಯಿದ್

(2) ಮಾರ್ಕ್ಸ್‌ವಾದಿ ವಿಮರ್ಶೆ – ಟಿ.ಎಸ್. ಇಲಿಯಟ್

(3) ಸ್ತ್ರೀವಾದಿ ವಿಮರ್ಶೆ – ಕೇಟ್ ಮಿಲ್ಲೆಟ್

(4) ವಸಾಹತೋತ್ತರ ವಿಮರ್ಶೆ – ವಾಲ್ಟರ್ ಬೆಂಜಮಿನ್

69. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?

(1) ತಾರಾಧಿನಾಥನ್ – ಹಲ್ಮಿಡಿ ಶಾಸನ

(2) ಭೂತುಗಂಗೆ ಕನ್ನರದೇವಂ ಮೆಚ್ಚುಗೊಟ್ಟಂ – ದೇಕಬ್ಬೆಯ ಬೆಳತೂರು ಶಾಸನ

(3) ಎಸಗಲ್ಗಾಳಿ ಪುಗಲ್ಪತಂಗ ಕಿರಣಂ – ಗೊಮ್ಮಟ ಸ್ತುತಿ

(4) ಮರೆದುಂ ಪಾತಿಂದು ಮೇಲೆ ಪಕ್ಷಿನಿವಹಂ – ಜಿನವಲ್ಲಭನ ಗಂಗಾಧರಂ ಶಾಸನ

70. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುವುದಿಲ್ಲ ?

(1) ಆನ್, ಆಲ್ – ತೃತೀಯಾ ವಿಭಕ್ತಿ

(2) ಪುದು, ಚಿಙು – ಸಂಖ್ಯಾವಾಚಕ

(3) ನಿಂಗ, ನಿಂಕುಳು – ಸರ್ವನಾಮ

(4) ಅರ್, ವರ್ – ಬಹುವಚನ ಪ್ರತ್ಯಯ

**ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮವನ್ನು ಗುರುತಿಸಿ.**

**71.** (1) ಯೋಗಾಂಗ ತ್ರಿವಿಧಿ, ಚಕ್ರೇಶ್ವರಿ ಚರಿತೆ, ಮಲ್ಲಿನಾಥ ಪುರಾಣ, ಪಂಪಾ ಶತಕ

(2) ಮಲ್ಲಿನಾಥ ಪುರಾಣ, ಚಕ್ರೇಶ್ವರಿ ಚರಿತೆ, ಯೋಗಾಂಗ ತ್ರಿವಿಧಿ, ಪಂಪಾ ಶತಕ

(3) ಚಕ್ರೇಶ್ವರಿ ಚರಿತೆ, ಯೋಗಾಂಗ ತ್ರಿವಿಧಿ, ಮಲ್ಲಿನಾಥ ಪುರಾಣ, ಪಂಪಾ ಶತಕ

(4) ಚಕ್ರೇಶ್ವರಿ ಚರಿತೆ, ಮಲ್ಲಿನಾಥ ಪುರಾಣ, ಯೋಗಾಂಗ ತ್ರಿವಿಧಿ, ಪಂಪಾ ಶತಕ

**72.** (1) ವಿಕ್ರಮೋರ್ವಶೀಯ, ಶಿವರಾತ್ರಿ, ಕೊಡೆಗಳು, ಬಹಿಷ್ಕಾರ

(2) ಶಿವರಾತ್ರಿ, ವಿಕ್ರಮೋರ್ವಶೀಯ, ಬಹಿಷ್ಕಾರ, ಕೊಡೆಗಳು

(3) ವಿಕ್ರಮೋರ್ವಶೀಯ, ಬಹಿಷ್ಕಾರ, ಕೊಡೆಗಳು, ಶಿವರಾತ್ರಿ

(4) ಬಹಿಷ್ಕಾರ, ಶಿವರಾತ್ರಿ, ಕೊಡೆಗಳು, ವಿಕ್ರಮೋರ್ವಶೀಯ

**73.** (1) ತಪೋನಂದನ, ಕಾವ್ಯಾರ್ಥಚಿಂತನ, ಮಹಿಳೆ ಸಾಹಿತ್ಯ ಸಮಾಜ, ಸಾಹಿತ್ಯ ಕಥನ

(2) ಕಾವ್ಯಾರ್ಥ ಚಿಂತನ, ತಪೋನಂದನ, ಸಾಹಿತ್ಯ ಕಥನ, ಮಹಿಳೆ ಸಾಹಿತ್ಯ ಸಮಾಜ

(3) ತಪೋನಂದನ, ಸಾಹಿತ್ಯ ಕಥನ, ಕಾವ್ಯಾರ್ಥಚಿಂತನ, ಸಾಹಿತ್ಯ ಕಥನ

(4) ಸಾಹಿತ್ಯ ಕಥನ, ತಪೋನಂದನ, ಕಾವ್ಯಾರ್ಥಚಿಂತನ, ಮಹಿಳೆ ಸಾಹಿತ್ಯ ಸಮಾಜ

**74.** (1) ಎ ದ್ರವೀಡಿಯನ್ ಎಟಿಮೋಲೋಜಿಕಲ್ ಡಿಕ್ಶನರಿ, ದ್ರಾವಿಡ ಭಾಷಾ ವಿಜ್ಞಾನ, ಎ ಕಂಪಾರಿಟಿವ್ ಗ್ರಾಮರ್ ಆಫ್ ದ್ರವೀಡಿಯನ್ ಲಾಂಗ್ವೇಜಸ್, ಕಿಟೆಲ್ ನಿಘಂಟು.

(2) ಎ ಕಂಪಾರಿಟಿವ್ ಗ್ರಾಮರ್ ಆಫ್ ದ್ರವೀಡಿಯನ್ ಲಾಂಗ್ವೇಜಸ್, ಕಿಟೆಲ್ ನಿಘಂಟು, ಎ ದ್ರವೀಡಿಯನ್ ಎಟಿಮೋಲೋಜಿಕಲ್ ಡಿಕ್ಶನರಿ, ದ್ರಾವಿಡ ಭಾಷಾ ವಿಜ್ಞಾನ.

(3) ಕಿಟೆಲ್ ನಿಘಂಟು, ಎ ಕಂಪಾರಿಟಿವ್ ಗ್ರಾಮರ್ ಆಫ್ ದ್ರವೀಡಿಯನ್ ಲಾಂಗ್ವೇಜಸ್, ದ್ರಾವಿಡ ಭಾಷಾ ವಿಜ್ಞಾನ, ಎ ದ್ರವೀಡಿಯನ್ ಎಟಿಮೋಲೋಜಿಕಲ್ ಡಿಕ್ಶನರಿ.

(4) ದ್ರಾವಿಡ ಭಾಷಾ ವಿಜ್ಞಾನ, ಎ ದ್ರವೀಡಿಯನ್ ಎಟಿಮೋಲೋಜಿಕಲ್ ಡಿಕ್ಶನರಿ, ಕಿಟೆಲ್ ನಿಘಂಟು, ಎ ಕಂಪಾರಿಟಿವ್ ಗ್ರಾಮರ್ ಆಫ್ ದ್ರವೀಡಿಯನ್ ಲಾಂಗ್ವೇಜಸ್.

**75.** (1) ಜನಪದ ಕೈಪಿಡಿ, ಹುಟ್ಟಿದ ಹಳ್ಳಿ, ಕನ್ನಡ ಜನಪದ ಗೀತೆಗಳು, ಕನ್ನಡ ಜಾನಪದ ವಿಶ್ವಕೋಶ

(2) ಕನ್ನಡ ಜನಪದ ಗೀತೆಗಳು, ಕನ್ನಡ ಜಾನಪದ ವಿಶ್ವಕೋಶ, ಜನಪದ ಕೈಪಿಡಿ, ಹುಟ್ಟಿದ ಹಳ್ಳಿ

(3) ಹುಟ್ಟಿದ ಹಳ್ಳಿ, ಜನಪದ ಕೈಪಿಡಿ, ಕನ್ನಡ ಜನಪದ ಗೀತೆಗಳು, ಕನ್ನಡ ಜಾನಪದ ವಿಶ್ವಕೋಶ

(4) ಹುಟ್ಟಿದ ಹಳ್ಳಿ, ಕನ್ನಡ ಜನಪದ ಗೀತೆಗಳು, ಕನ್ನಡ ಜಾನಪದ ವಿಶ್ವಕೋಶ, ಜನಪದ ಕೈಪಿಡಿ

**Space For Rough Work**